ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ.ಹೆಚ್. ಪೂಜಾರ, ಮಾನ್ಯ ಶಾಸಕರು, ಇವರು ಶೂನ್ಯ ವೇಳೆಯಲ್ಲಿ ಕೋರಿರುವ ಸೂಚನೆಗೆ ಮಾಹಿತಿ ಒದಗಿಸುವ ಕುರಿತು.

ವಿಷಯ:- ನೇಕಾರರ ಬದುಕು ಮೂರಾಬಟ್ಟೆ ಎಂದು ದಿನಾಂಕ:08.12.2025 ರಂದು ಕನ್ನಡ ದಿನಪತ್ರಿಕೆಯಲ್ಲಿ ವರದಿ ಪ್ರಕಟವಾಗಿರುವ ಕುರಿತು.

**ಪ್ರಶ್ನೆ**:- ದಿನಾಂಕ:08.12.2025, ಸೋಮವಾರದಂದು ಕನ್ನಡ ದಿನಪತ್ರಿಕೆಯಲ್ಲಿ "ನೇಕಾರರ ಬದುಕು ಮೂರಾಬಟ್ಟೆ" ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟಣೆಗೊಂಡಿರುವ ಜಾಗತೀಕರಣ, ಉದಾರೀಕರಣದ ಜತೆಗೆ ಬಂಡವಾಳಶಾಹಿಗಳ ಹಿಡಿತದ ಪರಿಣಾಮ ನೇಕಾರರ ಮೇಲೆ ಬೀಳುತ್ತಿದ್ದು, ಸರ್ಕಾರದ ದ್ವಂದ್ವ ನೀತಿ ಹಾಗೂ ಗೊಂದಲಮಯ ಯೋಜನೆಗಳಿಂದಾಗಿ ನೇಕಾರಿಕೆಯನ್ನೇ ಜೀವಾಳವಾಗಿ ಬದುಕತ್ತಿರುವವರಿಗೆ ತೀವ್ರ ಸಂಕಷ್ಟ ಎದುರಾಗಿವುದು ನೋವಿನ ಸಂಗತಿಯಾಗಿದೆ. ಜಗತ್ತಿಗೆ ಮಾನ ಮುಚ್ಚುವ ನೇಕಾರರ ಬದುಕು ಬೀದಿಗೆ ಬರುತ್ತಿದೆ. ಮಾರುಕಟ್ಟೆ ಏರಿಳಿತ, ತೆರಿಗೆ ಭಾರ, ಸರ್ಕಾರದ ಉದಾಸೀನ ಮನೋಭಾವ ಹೀಗೆ ಹತ್ತಾರು ಸಮಸ್ಯೆಗಳಿಂದ ಬಸವಳಿದಿದ್ದ ನೇಕಾರನ ಬದುಕು ಆತ ನೇಯುವ ಬಟ್ಟೆಯಷ್ಟು ಸುಂದರವಾಗಿಲ್ಲ, ಸಮಸ್ಯೆಗಳಲ್ಲೇ ಜೀವನ ನಡೆಸುತ್ತಿರುವ ನೇಕಾರರ ಬದುಕು ಮೂರಾಬಟ್ಟೆಯಾಗಿ ಸಂಕಷ್ಟಗಳ ಸುಳಿಯಲ್ಲಿ ಸಿಲುಕಿ ಸುಮಾರು 10 ಲಕ್ಷ ನೇಕಾರರ ಕುಟುಂಬಗಳ ಬದುಕು ಆತಂತ್ರವಾಗಿರುವುದು ದುರದೃಷ್ಟಕರ ಸಂಗತಿ.

ನೇಕಾರರ ಸಮುದಾಯವು ತಮ್ಮ ಬದುಕಿನೂದ್ದಕ್ಕೂ ನೇಕಾರಿಕೆಯನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳುವ ಅನಿವಾರ್ಯತೆ ಎದುರಾಗಿದೆ. ಈಗ ಕಸುವು ಕಳೆದುಕೊಂಡ ಕುಲ ಕಸುಬುವಾಗಿದೆ. ಆದರಲ್ಲೂ ನೇಕಾರಿಕೆಯೇ ಮೂಲ ಉದ್ಯೋಗವನ್ನಾಗಿ ಮಾಡಿಕೊಂಡಿರುವ ಉತ್ತರ ಕರ್ನಾಟಕ ಬಹುತೇಕ ಜಿಲ್ಲೆಗಳಲ್ಲಿ ನೇಕಾರರನ್ನು ಉಳಿಸಿ ಎಂಬ ಕೂಗು ನಿರಂತರವಾಗಿ ಪ್ರತಿಧ್ವನಿಸುತ್ತಲೇ ಇದೆ. ಪ್ರಸ್ತುತ ರಾಜ್ಯ ಸರ್ಕಾರವು ನೇಕಾರರಿಗೆ ಸಿಗಬೇಕಾದ ಸವಲತ್ತುಗಳ ಕುರಿತು ಸರ್ಕಾರವು ಅವರ ಬೇಡಿಕೆಗಳ ಅನುಗುಣವಾಗಿ ಕಾರ್ಯಪ್ರವೃತ್ತರಾಗಬೇಕಾಗಿದೆ.

ಸರ್ಕಾರದಿಂದ ವಿದ್ಯುತ್ ಮಗ್ಗಗಳು ಹಾಗೂ ಕೈಮಗ್ಗ ನೇಕಾರರ ಮಧ್ಯ ತಾರತಮ್ಯ ಧೋರಣೆ ಇರುವುದನ್ನು ಸರ್ಕಾರದ ಗಮನಕ್ಕೆ ತರಬಯಸುತ್ತಾ, ವಿದ್ಯುತ್ ಮಗ್ಗಗಳ ಅಭಿವೃದ್ಧಿ ಉದ್ದೇಶದಿಂದ ಸ್ಥಾಪಿತವಾಗಿರುವ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮದಿಂದ ಪ್ರತಿ ವರ್ಷ ವಿದ್ಯಾವಿಕಾಸ ಯೋಝನೆಯಡಿ ನಿಗಮದ ನೊಂದಾಯಿತ ಸದಸ್ಯರ ಮೂಲಕ ಸುಮಾರು 45 ಲಕ್ಷ ಮೀಟರ್ ಬಟ್ಟೆ ಸರಬರಾಜು ಹಾಗೂ ಕೈಮಗ್ಗ ಅಭಿವೃದ್ಧಿ ನಿಗಮದಿಂದ ಸುಮಾರು 1 ಕೋಟಿ ಮೀಟರ್ ಬಟ್ಟೆ ಸರಬರಾಜು ಮಾಡುವ ಯೋಜನೆ ಇದೆ. 1.50 ಲಕ್ಷ ವಿದ್ಯುತ್ ಮಗ್ಗಗಳಿಂದ 10 ಲಕ್ಷಮೀಟರ್ ಬಟ್ಟೆ ಸರಬರಾಜು, ಅದೇ 4500 ಕೈಮಗ್ಗಗಳಿಂದ 1 ಕೋಟಿ ಮೀಟರ್ ಬಟ್ಟೆ ಸರಬರಾಜುವಾಗುತ್ತಿದೆ. ಇದು ಯಾವ ನ್ಯಾಯ ಎಂಬುದು ನೇಕಾರರ ಸಂಘಟನೆಗಳ ಮುಖಂಡರ ಪ್ರಶ್ನೆಯಾಗಿದೆ. ಈ ಮೊದಲು ವಿದ್ಯುತ್ ಮಗ್ಗಗಳಿಂದ ವಿದ್ಯಾವಿಕಾಸ ಯೋಜನೆಗೆ 50 ರಿಂದ 60 ಲಕ್ಷ ಮೀಟರ್ ಬಟ್ಟೆ ಪಡೆಯುತ್ತಿದ್ದರು. ನಂತರ ಅದನ್ನು 10 ಲಕ್ಷ ಮೀಟರ್ ಗೆ ಇಳಿಸಿರುವುದು ವಿಪರ್ಯಾಸವಾಗಿದೆ. ಕಳೆದ 3ವರ್ಷಗಳಿಂದ ಈ ಯೋಜನೆಯನ್ನೇ ಸ್ಥಗಿತಗೊಳಿಸಲಾಗಿದೆ.

ನೆನೆಗುದಿಗೆ ಬಿದ್ದ ಜವಳಿ ಪಾರ್ಕ್‌ಗೆ ಇನ್ನೂ ಮುಕ್ತಿ ಸಿಕ್ಕಿಲ್ಲ ಹಾಗೂ ನೇಕಾರರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು. ನೇಕಾರರು ಆರ್ಥಿಕವಾಗಿ ಸದೃಢಗೊಳಿಸುವ ನಿಟ್ಟಿನಲ್ಲಿ ಸರ್ಕಾರವು ಈ ಕೂಡಲೇ ಆರ್ಥಿಕ ಪರಿಹಾರ ನೀಡಿ, ನೇಕಾರ ಕುಟುಂಬಗಳಿಗೆ ಧೈರ್ಯ ತುಂಬಬೇಕಾಗಿರುವುದು ಅನಿವಾರ್ಯವಾಗಿದೆ. ಆದ್ದರಿಂದ ರಾಜ್ಯದ ನೇಕಾರರ ಬದುಕಿನ ಹಿತದೃಷ್ಟಿಯಿದ ರಾಜ್ಯ ಸರ್ಕಾರ ನೇಕಾರರ ಬೇಡಿಕೆಗಳನ್ನು ಈಡೇರಿಸುವಂತೆ ಈ ಶೂನ್ಯವೇಳೆಯಲ್ಲಿ ಸರ್ಕಾರಕ್ಕೆ ಒತ್ತಾಯಿಸುತ್ತೇನೆ.

**ಉತ್ತರ**:- ಕೈಮಗ್ಗ ಮತ್ತು ಜವಳಿ ಇಲಾಖೆಯು ಕೈಮಗ್ಗ, ವಿದ್ಯುತ್‌ಮಗ್ಗ ಮತ್ತು ಜವಳಿ ಉದ್ದಿಮೆಗಳ ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮುಖ್ಯ ಉದ್ದೇಶ ಹೊಂದಿದೆ. ಈ ನಿಟ್ಟಿನಲ್ಲಿ ಸಣ್ಣ, ಅತಿ ಸಣ್ಣ, ಮಧ್ಯಮ ಮತ್ತು ಬೃಹತ್ ಜವಳಿ ಕೈಗಾರಿಕೆಗಳನ್ನು ಸ್ಥಾಪಿಸಲು ಬಂಡವಾಳ ಹೂಡಿಕೆ ಆಕರ್ಷಣೆ ಮತ್ತು ಹೊಸ ಉದ್ಯೋಗ ಸೃಷ್ಟಿಗೆ ಹಲವು ಯೋಜನೆಗಳನ್ನು ರೂಪಿಸಿದೆ.

2019-20 ನೇ ಸಾಲಿನ ಕೇಂದ್ರ ಸರ್ಕಾರದ 4ನೇ ರಾಷ್ಟ್ರೀಯ ಕೈಮಗ್ಗ ಗಣತಿ ಪ್ರಕಾರ ರಾಜ್ಯದಲ್ಲಿ 54791 ಕೈಮಗ್ಗ ನೇಕಾರರಿದ್ದು, 29377 ಕೈಮಗ್ಗಗಳು ಹಾಗೂ 2021-22 ನೇ ಸಾಲಿನ ರಾಜ್ಯ ಸರ್ಕಾರದ ವಿದ್ಯುತ್‌ಮಗ್ಗ ಗಣತಿ ಪ್ರಕಾರ ರಾಜ್ಯದಲ್ಲಿ 90645 ನೇಕಾರರು / ಕಾರ್ಮಿಕರಿದ್ದು, 96658 ವಿದ್ಯುತ್‌ಮಗ್ಗಗಳು ಇರುತ್ತವೆ. ನೇಕಾರರ ಬೇಡಿಕೆಗಳು ಹಾಗೂ ಇದನ್ನು ಈಡೇರಿಸಲು ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿದಂತೆ ಇಲಾಖೆ / ಸರ್ಕಾರದಿಂದ ತೆಗೆದುಕೊಂಡ ಕ್ರಮ ಇಂತಿದೆ:-

| ಕ್ರ.ಸಂ | ನೇಕಾರರ ಬೇಡಿಕೆಗಳು | ಬೇಡಿಕೆಗಳನ್ನು ಈಡೇರಿಸಲು ಕೈಗೊಂಡ ಕ್ರಮಗಳು |
|---|---|---|
| 1 | 01 ರಿಂದ 20 ಹೆಚ್.ಪಿ ವಿದ್ಯುತ್ ಸಂಪರ್ಕ ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗಪೂರ್ವ ಘಟಕಗಳಿಗೆ ಉಚಿತವಾಗಿ ವಿದ್ಯುತ್ ಒದಗಿಸುವುದು. | 2023-24ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-26 ರಲ್ಲಿ ಘೋಷಿಸಿದಂತೆ "01 ರಿಂದ 10 ಹೆಚ್.ಪಿ ವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ / ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ನೀಡಲಾಗುತ್ತಿದೆ.<br><br>"10.1 ಹೆಚ್.ಪಿ ಯಿಂದ 20 ಹೆಚ್.ಪಿ ವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ / ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಬಳಸಿದ ಒಟ್ಟು ಯೂನಿಟ್‌ಗಳಿಗೆ ಪ್ರತಿ ಯೂನಿಟ್‌ಗೆ ರೂ.1.25 ರಂತೆ ವಿದ್ಯುತ್ ಶುಲ್ಕವನ್ನು (Energy Charges) ಘಟಕದವರು ಪಾವತಿಸುವುದು. |
| 2 | ವೃತ್ತಿಪರ ನೇಕಾರರಿಗೆ ಕಟ್ಟಡ ಕಾರ್ಮಿಕ ಮಾದರಿಯ ಕಾರ್ಮಿಕ ಸೌಲಭ್ಯಗಳನ್ನು ಜಾರಿ ಮಾಡಿ ಗುರುತಿನ ಚೀಟಿ ಹಂಚಿಕೆ ಮಾಡಬೇಕು. | ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ಮೂಲಕ ನೇಕಾರ ವೃತ್ತಿಯಲ್ಲಿ ತೊಡಗಿರುವ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸಲು ನೇಕಾರರ ದತ್ತಾಂಶವನ್ನು ಆಯುಕ್ತರು, ಕಾರ್ಮಿಕ ಇಲಾಖೆ ರವರಿಗೆ ಒದಗಿಸಲಾಗಿರುತ್ತದೆ. |
| 3 | ಸಹಕಾರಿ ಸಂಘ / ಸಂಸ್ಥೆಗಳ ಹಾಗೂ ರಾಷ್ಟ್ರೀಕೃತ ಬ್ಯಾಂಕ್‌ಗಳನ್ನೊಗೊಂಡತೆ ನೇಕಾರರ ಸಂಪೂರ್ಣ ಸಾಲ ಮನ್ನಾ ಮಾಡುವುದು. | 2013-14 ರಿಂದ 2022-23 ನೇ ಸಾಲಿನವರೆಗೆ ನೇಕಾರರು ಸಹಕಾರ ಸಂಘ / ಸಂಸ್ಥೆಗಳಿಂದ ತೆಗೆದುಕೊಂಡ ಸಾಲವನ್ನು ರಾಜ್ಯ ಸರ್ಕಾರದಿಂದ ಸಾಲ ಮನ್ನಾ ಮಾಡಲಾಗಿರುತ್ತದೆ. |
| 5 | ಕೇಂದ್ರ ಸರ್ಕಾರ ಕಿಸಾನ್ ಸಮ್ಮಾನ್ ಯೋಜನೆಯಂತೆ ನೇಕಾರರಿಗೂ ಬುನಕರ್ ಸಮ್ಮಾನ್ ಯೋಜನೆ ಜಾರಿಗೆ ತರಬೇಕು. | ಇಲಾಖೆಯಿಂದ ನೇಕಾರರ ಸಮ್ಮಾನ್ ಯೋಜನೆಯಡಿ ಕೈಮಗ್ಗ ಮತ್ತು ವಿದ್ಯುತ್‌ಮಗ್ಗ ನೇಕಾರರಿಗೆ ಪ್ರತಿ ವರ್ಷ ರೂ.5,000/- ಗಳನ್ನು ಡಿ.ಬಿ.ಟಿ. ಮುಖಾಂತರ ಪಾವತಿಸಲಾಗುತ್ತಿದೆ. |
| 6 | ದೇಶದ ಎಲ್ಲ ರೈಲು ನಿಲ್ದಾಣ ಮತ್ತು ವಿಮಾನ ನಿಲ್ದಾಣಗಳಲ್ಲಿ ನೇಕಾರರು ಉತ್ಪಾದಿಸಿದ ಉತ್ಪಾದನೆಗಳ ನೇರ ಮಾರಾಟ ಮಾಡಲು ಮಳಿಗೆಗಳನ್ನು ಒದಗಿಸಿ ನೇಕಾರ ಮತ್ತು ನೇಕಾರಿಕೆಯನ್ನು ಪ್ರೋತ್ಸಾಹಿಸಬೇಕು. | ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು VTPC ಸಹಯೋಗದೊಂದಿಗೆ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ (BAIL) ದ ಟರ್ಮಿನಲ್-2ರಲ್ಲಿ ದೇಶೀಯ ಹಾಗೂ ಅಂತರಾಷ್ಟ್ರೀಯ ಪ್ರಯಾಣಿಕರ ನಿರ್ಗಮನ ಸ್ಥಳಗಳಲ್ಲಿ ತಮ್ಮ ಉತ್ಪನ್ನಗಳನ್ನು ಪ್ರದರ್ಶನ ಮತ್ತು ಮಾರಾಟವನ್ನು ಮಾಡಲು "ಕಲಾ ಲೋಕ" ಎಂಬ ಹೆಸರಿನಲ್ಲಿ ಕೈಮಗ್ಗ ಉತ್ಪನ್ನಗಳ ಮಳಿಗೆಗಳನ್ನು ಸ್ಥಾಪಿಸಲಾಗಿದೆ. |

**ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ:-**

ಪ್ರಸ್ತುತ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಡಿ 3,479 ಕಾರ್ಯನಿರತ ನೇಕಾರರು ಇದ್ದು, ಸದರಿ ನೇಕಾರರಿಗೆ ನಿರಂತರವಾಗಿ ಕಚ್ಚಾಮಾಲನ್ನು ಪೂರೈಸಿ ಉದ್ಯೋಗ ಒದಗಿಸಲಾಗುತ್ತಿದೆ.

2024-25 ನೇ ಸಾಲಿನಲ್ಲಿ ರೂ.1093.48 ಲಕ್ಷ ಮೊತ್ತದ 2.71 ಲಕ್ಷ ಕೆ.ಜಿ ಕಚ್ಚಾ ನೂಲನ್ನು ನಿಗಮದ ನೋಂದಾಯಿತ ಕೈಮಗ್ಗ ನೇಕಾರರಿಗೆ ಪೂರೈಸಿ ಅವರಿಂದ ರೂ.1678.98 ಲಕ್ಷ ಮೊತ್ತದ 19.03 ಲಕ್ಷ ಮೀಟರ್ ಬಟ್ಟೆಯನ್ನು ಉತ್ಪಾದಿಸಲಾಗಿದೆ ಹಾಗೂ ನೇಕಾರರಿಗೆ ರೂ.618.06 ಲಕ್ಷ ಮೊತ್ತವನ್ನು ಪರಿವರ್ತನಾ ಶುಲ್ಕ ಪಾವತಿಸಲಾಗಿದೆ.

ವಿದ್ಯಾವಿಕಾಸ ಯೋಜನೆಯಡಿಯಲ್ಲಿ ಶಿಕ್ಷಣ ಇಲಾಖೆಯಿಂದ ಪ್ರತಿ ವರ್ಷ ಸಮವಸ್ತ್ರ ಪೂರೈಕೆಗೆ ನಿಗಮ ಸರಬರಾಜು ಆದೇಶವನ್ನು ಪಡೆಯುತ್ತಿದ್ದು, 2024-25 ನೇ ಸಾಲಿನಲ್ಲಿ 15.65 ಕೋಟಿ ಮೊತ್ತದ 21.15 ಲಕ್ಷ ಮೀಟರ್ ಸಮವಸ್ತ್ರ ಬಟ್ಟೆಗಳನ್ನು ಶಿಕ್ಷಣ ಇಲಾಖೆಗೆ ಪೂರೈಸುವುದರ ಮೂಲಕ ನೇಕಾರರಿಗೆ ನಿರಂತರ ಉದ್ಯೋಗ ಒದಗಿಸಿಕೊಡಲಾಗಿರುತ್ತದೆ.

2025-26 ನೇ ಸಾಲಿನಲ್ಲಿ ಅಕ್ಟೋಬರ್ ತಿಂಗಳ ಅಂತ್ಯದವರೆಗೆ ರೂ. 470.76 ಲಕ್ಷ ಮೊತ್ತದ 1.38 ಲಕ್ಷ ಕೆ.ಜಿ ಕಚ್ಚಾ ನೂಲನ್ನು ನಿಗಮದ ನೋಂದಾಯಿತ ಕೈಮಗ್ಗ ನೇಕಾರರಿಗೆ ಪೂರೈಸಿ ಅವರಿಂದ ರೂ.892.79 ಲಕ್ಷ ಮೊತ್ತದ 10.09ಲಕ್ಷ ಮೀಟರ್ ಬಟ್ಟೆಯನ್ನು ಉತ್ಪಾದಿಸಲಾಗಿದೆ ಹಾಗೂ ನೇಕಾರರಿಗೆ ರೂ.362.39 ಲಕ್ಷ ಮೊತ್ತವನ್ನು ಪರಿವರ್ತನಾ ಶುಲ್ಕ ಪಾವತಿಸಲಾಗಿದೆ.

ವಿದ್ಯಾವಿಕಾಸ ಯೋಜನೆಯಡಿಯಲ್ಲಿ 2025-26 ನೇ ಸಾಲಿಗೆ ಶಿಕ್ಷಣ ಇಲಾಖೆಯಿಂದ ಸಮವಸ್ತ್ರ ಪೂರೈಕೆಗೆ ಸರಬರಾಜು ಆದೇಶವನ್ನು ನಿರೀಕ್ಷಿಸಲಾಗಿದೆ.

**ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ:-**

ಕರ್ನಾಟಕ ರಾಜ್ಯ ಜವಳಿ ಮೂಲ ಸೌಲಭ್ಯ ಅಭಿವೃದ್ಧಿ ನಿಗಮಕ್ಕೆ ಉತ್ಪಾದನಾ ಸಾಮರ್ಥ್ಯಕ್ಕೆ ಅನುಗುಣವಾಗಿ ಶೈಕ್ಷಣಿಕ ವರ್ಷವಾರು ಶಿಕ್ಷಣ ಇಲಾಖೆಯಿಂದ ಈ ಕೆಳಕಂಡಂತೆ ಸಮವಸ್ತ್ರಗಳನ್ನು ಸರಬರಾಜು ಮಾಡಲು ಆದೇಶ ನೀಡಲಾಗಿರುತ್ತದೆ.

| ವರ್ಷ | ಬಟ್ಟೆ ಸರಬರಾಜು ಆದೇಶದ ಪ್ರಮಾಣ (ಲಕ್ಷ ಮೀಟರ್‌ಗಳಲ್ಲಿ) | ಸರಬರಾಜು ಮಾಡಿದ ಬಟ್ಟೆ ಪ್ರಮಾಣ (ಲಕ್ಷ ಮೀಟರ್‌ಗಳಲ್ಲಿ) | ಮೌಲ್ಯ (ರೂ.ಕೋಟಿಗಳಲ್ಲಿ) |
|---|---|---|---|
| 2019-20 | 9.93 | 9.93 | 5.75 |
| ನೆರೆ ಸಂತ್ರಸ್ತರು | 1.79 | 1.79 | 0.99 |
| 2020-21 | ಕೋವಿಡ್-19 ಪ್ರಯುಕ್ತ ಸರಬರಾಜು ಆದೇಶ ನೀಡಿರುವುದಿಲ್ಲ. | | |
| 2021-22 | 10.01 | 10.01 | 5.90 |
| 2022-23 | 10.47 | 10.47 | 8.06 |

ನೇಕಾರರನ್ನು ಸಾಮಾಜಿಕ ಹಾಗೂ ಆರ್ಥಿಕವಾಗಿ ಸದೃಢಗೊಳಿಸುವ ನಿಟ್ಟಿನಲ್ಲಿ ಹಾಗೂ ನೇಕಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಇಲಾಖೆಯಿಂದ ಈ ಕೆಳಕಂಡ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ:-

**ಕೈಮಗ್ಗ ವಲಯದ ಯೋಜನೆಗಳು:-**

- **ನೇಕಾರರ ಸಮ್ಮಾನ್ ಯೋಜನೆ:-**

  ಕೈಮಗ್ಗ ನೇಕಾರರ ಚಟುವಟಿಕೆಗಳ ಪಾರಂಪರಿಕ ಕಲೆ ಮತ್ತು ಅವರ ಶ್ರಮವನ್ನು ಪರಿಗಣಿಸಿ ಹಾಗೂ ಕೋವಿಡ್-19 ಮಹಾಮಾರಿ ಮತ್ತು ಆರ್ಥಿಕ ಹಿನ್ನಡೆಯಿಂದ ಸಂಕಷ್ಟದಲ್ಲಿರುವ ಕೈಮಗ್ಗ ನೇಕಾರರಿಗೆ 2020-21 ನೇ ಸಾಲಿನಿಂದ ಅನ್ವಯವಾಗುವಂತೆ, **"ನೇಕಾರರ ಸಮ್ಮಾನ್"** ಯೋಜನೆಯನ್ನು ಘೋಷಿಸುವ ಮೂಲಕ ರೂ.2,000/- ಗಳ ವಾರ್ಷಿಕ ಆರ್ಥಿಕ ನೆರವನ್ನು ನೇರ ನಗದು ವರ್ಗಾವಣೆ ಮೂಲಕ ನೀಡಲು ಆದೇಶಿಸಲಾಗಿರುತ್ತದೆ.

- **ಸಹಕಾರ ಬ್ಯಾಂಕ್‌ಗಳು ನೀಡಿದ ಶೂನ್ಯ / 1% ಮತ್ತು 3% ಸಾಲದ ಮೇಲೆ ಬಡ್ಡಿ ಸಹಾಯಧನ ಹಾಗೂ ಶೇ.8 ರ ಬಡ್ಡಿ ಸಹಾಯಧನ:-**

  ನೇಕಾರರ ಸಹಕಾರ ಸಂಘಗಳು / ಕೈಗಾರಿಕಾ ಸಹಕಾರ ಬ್ಯಾಂಕ್‌ಗಳು / ಕೃಷಿಯೇತರ / ಕೃಷಿ ಪತ್ತಿನ ಸಹಕಾರ ಸಂಘಗಳು / ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗಳು ಹಾಗೂ ಇತರೆ ಸಹಕಾರ ಬ್ಯಾಂಕ್‌ಗಳು ರಾಜ್ಯದ ಕೈಮಗ್ಗ ಮತ್ತು ವಿದ್ಯುತ್‌ಮಗ್ಗಗಳ ನೇಕಾರರಿಗೆ ನೇಕಾರಿಕೆ ಮತ್ತು ನೇಕಾರಿಕೆಗೆ ಸಂಬಂಧಿಸಿದ ಉದ್ದೇಶಗಳಿಗಾಗಿ **'ಶೂನ್ಯ'** ಬಡ್ಡಿ ದರದಲ್ಲಿ; ರೂ.2.00 ಲಕ್ಷಗಳವರೆಗೆ ನೀಡುವ ಸಾಲಕ್ಕೆ ಸರ್ಕಾರದಿಂದ ಗರಿಷ್ಠ ಶೇ.11 ಬಡ್ಡಿ ಸಹಾಯಧನವನ್ನು ಎಲ್ಲಾ ರೀತಿಯ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳಿಗೆ ಬಡ್ಡಿ ಸಹಾಯಧನ ನೀಡಲಾಗುತ್ತಿದೆ.

- **ಕೈಮಗ್ಗ ಉತ್ಪನ್ನಗಳ ಮಾರಾಟ ಮೇಲೆ ಶೇ.20 ರಿಬೇಟ್ ಯೋಜನೆ:-**

  ಕೈಮಗ್ಗ ನೇಕಾರರ ಸಹಕಾರ ಸಂಘಗಳು ಹಾಗೂ ಕೈಮಗ್ಗ ಮಹಾಮಂಡಳಗಳು ತಮ್ಮ ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ಸರ್ಕಾರ ನೀಡುವ ಶೇಕಡಾ 20 ರಿಬೇಟ್ ಅನ್ನು ವರ್ಷದ 365 ದಿನಗಳು ಮಾರಾಟ ಮಾಡಿದ ಕೈಮಗ್ಗ ಉತ್ಪನ್ನಗಳಿಗೆ ರಾಜ್ಯ ಸರ್ಕಾರ ವತಿಯಿಂದ ಮರುಪಾವತಿಸಲಾಗುತ್ತಿದೆ.

ವಿದ್ಯುತ್‌ಮಗ್ಗ ವಲಯ ಯೋಜನೆಗಳು:-

- **ನೇಕಾರರ ಸಮ್ಮಾನ್ ಯೋಜನೆ:-**

ರಾಜ್ಯದಲ್ಲಿನ ವಿದ್ಯುತ್‌ಮಗ್ಗ ವಲಯದಲ್ಲಿ ನೇಕಾರನಾಗಿ ಅಥವಾ ಸ್ವಂತ ನೇಯ್ಗೆ ಕಾರ್ಮಿಕನಾಗಿ ಅಥವಾ ಮಗ್ಗ ಪೂರ್ವ ಘಟಕಗಳಲ್ಲಿ ನೇಕಾರಿಕೆಯ ಪೂರಕ ಚಟುವಟಿಕೆಗಳಾದ ಟ್ವಿಸ್ಟಿಂಗ್, ವೈಂಡಿಂಗ್, ಯಾರ್ನ್ ಡೈಯಿಂಗ್, ವಾರ್ಪಿಂಗ್, ಝರಿ ವೈಂಡಿಂಗ್ & ವಾರ್ಪಿಂಗ್, ವಾರ್ಪ್ ನಾಟಿಂಗ್, ಸೈಜಿಂಗ್ ಹಾಗೂ ಇತರೆ ವಿದ್ಯುತ್ ಮಗ್ಗ ಚಟುವಟಿಕೆಗಳಲ್ಲಿ ತೊಡಗಿರುವ ಫಲಾನುಭವಿಗಳಿಗೆ "ನೇಕಾರರ ಸಮ್ಮಾನ್ ಯೋಜನೆ" ಯಡಿ ರೂ.5,000/- ಗಳ ವಾರ್ಷಿಕ ಆರ್ಥಿಕ ನೆರವನ್ನು ನೀಡಲಾಗುತ್ತಿದೆ.

- **ನೇಕಾರರ ಮಕ್ಕಳಿಗೆ ವಿದ್ಯಾರ್ಥಿ ವೇತನ:-**

ನೇಕಾರರ ಮಕ್ಕಳ ಉನ್ನತ ಶಿಕ್ಷಣ ಪ್ರೋತ್ಸಾಹಿಸಲು ಕರ್ನಾಟಕ ರಾಜ್ಯದ ಯಾವುದೇ ಭಾಗದಲ್ಲಿರುವ ಅಧಿಕೃತವಾಗಿ ನೋಂದಣಿಯಾಗಿರುವ ಶಿಕ್ಷಣ ಸಂಸ್ಥೆ / ವಿಶ್ವವಿದ್ಯಾಲಯಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಈ ಕೆಳಕಂಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ. ವಿವರ ಈ ಕೆಳಗಿನಂತಿರುತ್ತದೆ.

| ಕ್ರ. ಸಂ | ಕೋರ್ಸ್‌ನ ಹೆಸರು / ಕೋರ್ಸ್‌ನ ವಿಧಗಳು | ಹುಡುಗರು / ಪುರುಷರು | ಹುಡುಗಿಯರು / ಅನ್ಯ ಲಿಂಗದವರು |
|---|---|---|---|
| 1 | ಪದವಿಯ ಮುಂಚೆ ಪಿ.ಯು.ಸಿ / ಐ.ಟಿ.ಐ / ಡಿಪ್ಲೋಮಾ | ರೂ.2,500/- | ರೂ.3,000/- |
| 2 | ಎಲ್ಲಾ ಬಿ.ಎ/ಬಿ.ಎಸ್.ಸಿ/ ಬಿ.ಕಾಂ ಇತ್ಯಾದಿ, ಎಂ.ಬಿ.ಬಿ.ಎಸ್/ಬಿ.ಇ/ಬಿ.ಟೆಕ್ ಮತ್ತು ವೃತ್ತಿ ಪರ ಕೋರ್ಸ್‌ಗಳನ್ನು ಹೊರತುಪಡಿಸಿ | ರೂ.5,000/- | ರೂ.5,500/- |
| 3 | ಎಲ್.ಎಲ್.ಬಿ /ಪ್ಯಾರಾ ಮೆಡಿಕಲ್/ ಬಿ.ಫಾರ್ಮ್ / ನರ್ಸಿಂಗ್ ಇತ್ಯಾದಿ ವೃತ್ತಿ ಪರ ಕೋರ್ಸ್‌ಗಳು | ರೂ.7,500/- | ರೂ.8,000/- |
| 4 | ಎಂ.ಬಿ.ಬಿ.ಎಸ್/ಬಿ.ಇ/ಬಿ.ಟೆಕ್ ಮತ್ತು ಎಲ್ಲಾ ಸ್ನಾತಕೋತ್ತರ ಕೋರ್ಸ್‌ಗಳು | ರೂ.10,000/- | ರೂ.11,000/- |

- **ವಿದ್ಯುತ್ ರಿಯಾಯಿತಿ ಸಹಾಯಧನ:-**

2023-24ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ-265 ರನ್ವಯ "10 ಹೆಚ್.ಪಿ. ವರೆಗಿನ ವಿದ್ಯುತ್ ಸಂಪರ್ಕ ಹೊಂದಿರುವ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಮಾಸಿಕ ಗರಿಷ್ಠ 250 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಒದಗಿಸುವ ಮೂಲಕ ನೇಕಾರರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿಸಲು ಕ್ರಮ ವಹಿಸಲಾಗುವುದು" ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ರಾಜ್ಯದ ಶೇ.80 ರಷ್ಟು ಸಣ್ಣ ಪ್ರಮಾಣದ ನೇಕಾರರಿಗೆ ಅನುಕೂಲವಾಗುವುದರಿಂದ "10 ಹೆಚ್.ಪಿ ವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ / ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ Energy Charges + Fixed Charges(FC) + Fuel adjustment charges(FAC) + Tax ಸೇರಿದಂತೆ ಸಂಪೂರ್ಣ ಬಿಲ್ ಮೊತ್ತವನ್ನು ಸರ್ಕಾರದಿಂದ ಭರಿಸಿ ಹಾಗೂ "ಶೂನ್ಯ ಬಿಲ್" ನೀಡಲಾಗುತ್ತಿದೆ.

"10.1 ಹೆಚ್.ಪಿ ಯಿಂದ 20 ಹೆಚ್.ಪಿ ವರೆಗೆ ವಿದ್ಯುತ್ ಸಂಪರ್ಕ ಹೊಂದಿರುವ / ಪಡೆದ ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ಬಳಸಿದ ಒಟ್ಟು ಯೂನಿಟ್‌ಗಳಿಗೆ ಪ್ರತಿ ಯೂನಿಟ್‌ಗೆ ರೂ.1.25 ರಂತೆ ವಿದ್ಯುತ್ ಶುಲ್ಕವನ್ನು (Energy Charges) ಘಟಕದವರು ಪಾವತಿಸುವುದು. ಬಾಕಿ ಉಳಿಯುವ ವಿದ್ಯುತ್ ಶುಲ್ಕದ ಮೊತ್ತವನ್ನು ಮಾತ್ರ ಸರ್ಕಾರದ ಬೊಕ್ಕಸದಿಂದ ಭರಿಸುವುದು. ಉಳಿದಂತೆ, ನಿಗದಿತ ಶುಲ್ಕ (Fixed Charges), ಇಂಧನ ಹೊಂದಾಣಿಕಾ ಶುಲ್ಕ (Fuel adjustment charges), ವಿದ್ಯುತ್ ತೆರಿಗೆ (Tax) ಮೊತ್ತಗಳನ್ನು ನೇಕಾರರೇ / ಘಟಕದವರೇ ಭರಿಸತಕ್ಕದ್ದು" ಎಂದು ತಿದ್ದುಪಡಿ ಮಾಡಿ ದಿನಾಂಕ: 25.09.2024 ರಲ್ಲಿ ಆದೇಶ ಹೊರಡಿಸಲಾಗಿರುತ್ತದೆ.

ಇದರಿಂದಾಗಿ ರಾಜ್ಯದಲ್ಲಿನ 01 ರಿಂದ 10 ಹೆಚ್.ಪಿ ವರೆಗಿನ ಸುಮಾರು 29288 ಘಟಕಗಳು ಹಾಗೂ 10ಕ್ಕಿಂತ ಹೆಚ್ಚು ಮತ್ತು 20 ಹೆಚ್.ಪಿ ವರೆಗಿನ ಸುಮಾರು 2067 ವಿದ್ಯುತ್ ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳು ಪ್ರಯೋಜನ ಪಡೆಯುತ್ತಿರುತ್ತಾರೆ. ವಿವರ ಈ ಕೆಳಗಿನಂತಿರುತ್ತದೆ.

ಸಂಖ್ಯೆ: CI 297 JAKE 2025

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು